## ನಗರ ಡಿವೀರ್ಜ.

### ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಆರ್ಜೀ ನಂಬರ್ 131.

ಮೃತಪಟ್ಟ ನಾರಾಯಣಪ್ಪ ಯಂಬವನ ಆಸ್ತಿ ವಿಷಯವಲ್ಲಿ—

ಅರ್ಜೀದಾರ ಕೃಷ್ಣಪ್ಪ, ಮೃತಪಟ್ಟ ಸದರೀ ನಾರಾಯಣಪ್ಪ ಯಂಬವನಿಗೆ ಸಹೋದರನು ಆಗಬೇಕೆಂಬ ಹಕ್ಕುದಾರೀ ಮೇಲೆ ಮೂಡಗೆರೆ ತಾಲ್ಲೂಕು ಕಳಸದ ಮೂಗಣಿ ಮೇಲಂಗಡಿ ಸ್ಥಳದ ಕೃಷ್ಣಪ್ಪ ಯಂಬವನು ಸದರೀ ಮೇಲಂಗಡಿ ವಾಸಸ್ಥನಾಗಿ ಮೃತಪಟ್ಟ ನಾರಾಯಣಪ್ಪ ಯಂಬವನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕೃಷ್ಣಪ್ಪ ಯಂಬವನ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 31ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಾಯಣಪ್ಪ ಯಂಬವನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಡಿಸಂಬರ್ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತೊಡನೆ ಕೊಪೋಣಾಗಿದೆ.

---

ತಾರೀಖು 31ನೇ ಡಿಸಂಬರ್ 1884.

ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳಿಂದ ಕಮ್ಮಿಟಾದ ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆ ಬಗ್ಯೆ ಕೆಲಸಗಳು ಸ್ಯ 1885ನೇ ಇಸವಿಯಲ್ಲಿ ಇದರಡಿ ಕಂಡ ತಾರೀಖುಗಳಲ್ಲಿ ಸದರೀ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾರ್ಟರ್‌ಗಳೊಳಗೆ ನಡಿಸಲ್ಪಡುವವು;—

| ಶಿವಮೊಗ್ಗಾ ಡಿಸ್ಟ್ರಿಕ್ಟು. | | ಕಡೂರು ಡಿಸ್ಟ್ರಿಕ್ಟು. | |
|---|---|---|---|
| 5ನೇ ಜನವರೀ | ಸೋಮವಾರ. | 2ನೇ ಫಿಬ್ರವರೀ | ಸೋಮವಾರ. |
| 2ನೇ ಮಾರ್ಚೀ | ಸೋಮವಾರ. | 4ನೇ ಮೇ | ಸೋಮವಾರ. |
| 8ನೇ ಏಪ್ರಿಲ್ | ಬುಧವಾರ. | 3ನೇ ಆಗಸ್ಟು | ಸೋಮವಾರ. |
| 1ನೇ ಜೂನ್ | ಸೋಮವಾರ. | 2ನೇ ನವಂಬರ್ | ಸೋಮವಾರ. |
| 6ನೇ ಜುಲ್ಯೆ | ಸೋಮವಾರ, | | |
| 7ನೇ ಕಿಪ್ಟಂಬರ್ | ಸೋಮವಾರ. | | |
| 5ನೇ ಅಕ್ಟೋಬರ್ | ಸೋಮವಾರ. | | |
| 7ನೇ ಡಿಸಂಬರ್ | ಸೋಮವಾರ. | | |

ದರ್ಯಾಫ್ತ್ ಬಗ್ಯೆ ಮೊಕದ್ದಮೆಗಳನ್ನು ಕಮ್ಮಿಟ್ ಮಾಡಲು ಅಧಿಕಾರವುಳ್ಳ ದರೋಬಸ್ತು ಮಾಜಿಸ್ಟ್ರೇಟುಗಳೂ, ತಾವು ಕಮ್ಮಿಟ್ ಮಾಡುವ ಮೊಕದ್ದಮೆಗಳಲ್ಲಿನ ಫಿರ್ಯಾದೀಗಳು ಮತ್ತು ಸಾಕ್ಷೀಗಳು ಆಯಾ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾರ್ಟರುಗಳೊಳಗೆ ಮೇಲೆ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಬೆಳಿಗ್ಯೆ 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗುವಂತೆ ಅವರುಗಳಿಂದ ಮುಚ್ಚಲಿಕೆ ತೆಗದು ಕೊಳ್ಳತಕ್ಕ ವೆಂದು ಕೋರಲ್ಪಟ್ಟಿರುತ್ತಾರೆ.

ಟಿ. ನರಸಿರಾವ್,
ಸೆಷನ್ಸ್ ಜಡ್ಜ್.

---